***ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಫಿರ್ಯಾದಿ ಸಾಕ್ಷಿ.1 ರವರನ್ನು ಪುನಃ ಕರೆಸಿ, ಪಾಟೀ ಸವಾಲು ಮಾಡಲು ಅನುಮತಿಸಿರುತ್ತದೆ.***

***ಪಾಟೀ ಸವಾಲು ಃ 1 ರಿಂದ 7 ಆರೋಪಿಗಳ ಪರ ಎಂ.ಬಿ ವಕೀಲರಿಂದ***

*ಚಾಸಾ.4 ನಿಮ್ಮ ತಾಯಿ ಎಂದರೆ ಸರಿ. ಚಾಸಾ.2, ಚಾಸಾ.4 ರವರ ಅಣ್ಣನ ಮಗ ಎಂದರೆ ಸರಿ. ಸರ್ವೆ ನಂ. 86, ಅಂತನಹಳ್ಳಿ ಗ್ರಾಮ ಮೊದಲು ಗೋಮಾಳದ ಜಮೀನು ಎಂದರೆ ನನಗೆ ಗೊತ್ತಿಲ್ಲ ಹಾಗೂ ನನ್ನ ತಂದೆಗೆ ಮಂಜೂರು ಆಗಿರುವುದು ನನಗೆ ಗೊತ್ತು. ಸರ್ವೆ ನಂ. 86 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 86 ರಲ್ಲಿ ತುಂಬಾ ಜನ ಅನುಭವದಲ್ಲಿರುತ್ತಾರೆ ಎಂದರೆ, ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ. ಸರ್ವೆ ನಂ. 86 ಇನ್ನು ಸರ್ಕಾರಿ ಹದ್ದುಬಸ್ತು, ಸರ್ವೆ ಹದ್ದುಬಸ್ತಾಗಿದೆಯಾ ಎಂದರೆ, ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಜಮೀನಿನ ಪೂರ್ವ ಭಾಗಕ್ಕೆ ಆರೋಪಿಗಳ ಇಡುವಳಿ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅದು ಗೋಮಾಳ ಎನ್ನುತ್ತಾರೆ. ಸರ್ವೆ ನಂ. 86 ಪೂರ್ವ ದಿಕ್ಕಿಗೆ ಗೋಮಾಳ ಇದೆ ಎನ್ನುವ ಬಗ್ಗೆ ನಾನು ದಾಖಲೆ ಕೊಟ್ಟಿಲ್ಲ. ಆರೋಪಿಗಳ ಮೇಲೆ ಸಿವಿಲ್ ದಾಖಲೆ ಹಾಕಿರುತ್ತೀರ ಎಂದರೆ ಸರಿ. ಅಂತನಹಳ್ಳಿ ಗ್ರಾಮದಲ್ಲಿ ಒಕ್ಕಲಿಗರು ಬಲಿಷ್ಟವಾಗಿರುತ್ತಾರೆ ಎಂದರೆ, ಸಾಕ್ಷಿ ಇಲ್ಲ ಎಂದು ಉತ್ತರಿಸಿ, ಆರೋಪಿಗಳು ಅಂದರೆ ಗಂಗ ಮತಸ್ಥರು ಬಲಿಷ್ಟವಾಗಿರುತ್ತಾರೆ ಎಂದು ಹೇಳುತ್ತಾರೆ. ನಿಮ್ಮ ಜಮೀನಿನ ದಕ್ಷಿಣ ಭಾಗಕ್ಕೆ ಮರೀಗೌಡರ ಜಮೀನಿದೆ ಎಂದರೆ ಸರಿ. ನಿಮ್ಮ ಜಮೀನಿಗೆ ಒತ್ತಿಕೊಂಡಿರುವಂತೆ ರೇವತಿ(ಮರೀಗೌಡ ಹಿರಿ ಮಗನ ಹೆಂಡತಿ) ಎಂಬುವರ ಜಮೀನಿದೆ ಎಂದರೆ ಸರಿ. ನಾನು 2000 ನೇ ಇಸವಿಯಲ್ಲಿ ಹೌಸಿಗ್ ಬೋರ್ಡ್ ಸೊಸೈಟಿಯ*

*ಅಧ್ಯಕ್ಷನಾಗಿದ್ದೆ ಎಂದರೆ ಸರಿ. ಪಿ.ಎಲ್.ಡಿ ಬ್ಯಾಂಕ್ ನಲ್ಲಿ 2005 ನೇ ಇಸವಿಯಲ್ಲಿ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ಈಗಲೂ ನೀವು ರಾಜಕೀಯದಲ್ಲಿ ಸಕ್ರಿಯರಾಗಿದ್ದೀರ ಎಂದರೆ ಸರಿಯಲ್ಲ. 1 ನೇ ಆರೋಪಿ ವಿರುದ್ಧ ಸಿವಿಲ್ ವ್ಯಾಜ್ಯ ದಾಖಲಿಸಿ, ನೀವು ನಡೆಸಿರುತ್ತೀರ ಎಂದರೆ ಸರಿಯಲ್ಲ. ನೀವು ಈಗಲೂ ಗ್ರಾಮದವರ ಮೇಲೆ ಕೆಲವು ಸಿವಿಲ್ ವ್ಯಾಜ್ಯಗಳನ್ನು ಹೂಡಿರುತ್ತೀರ ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಜಮೀನಿಗೆ ಹೊಂದಿಕೊಂಡಿರುವ ಸರ್ವೆ ನಂ 86 ರ ಜಮೀನನ್ನು ಒತ್ತುವರಿ ಮಾಡಿಕೊಂಡು ಪೂರ್ವ ಕಾಲದಿಂದಲೂ ಅನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳ ಸ್ವಾಧೀನವನ್ನು ಏಗಾದರೂ ಮಾಡಿ ಬಿಡಿಸಬೇಕೆಂದು ಸುಳ್ಳು ದೂರು ಕೊಟ್ಟಿರುತ್ತೀರ ಎಂದರೆ ಸರಿಯಲ್ಲ. ಸರ್ವೆ ನಂ 86 ರಲ್ಲಿ 1 ಎಕರೆ 34 ಗುಂಟೆ ದರ್ಕಾಸ್ತಿನಲ್ಲಿ ನಿಮ್ಮ ಹೆಸರಿಗೆ ಆಗಿದೆ ಎಂದರೆ ಸರಿ. ನಿಮ್ಮ ತಾಯಿಯವರ ಹೆಸರಿನಲ್ಲಿ ಸರ್ವೆ ನಂ. 86 ರಲ್ಲಿ 1 ಎಕರೆ ಪೌತಿ ಖಾತೆ ಮೇರೆಗೆ ಬರುತ್ತಿದೆ ಎಂದರೆ ಸರಿ. ಮು. ಮಾ 1 ಮತ್ತು 2 ಎಲ್ಲಾ ರೈತರ ಮನೆಗಳಲ್ಲಿ ಸಿಗುತ್ತದೆ ಎಂದರೆ ಸರಿ. ಆರೋಪಿಗಳು ಯಾವುದೇ ಅಕ್ರಮ ಕೃತ್ಯದಲ್ಲಿ ಪಾಲ್ಗೊಂಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ರಾಜಕೀಯ ಪ್ರಭಾವವನ್ನು ಬಳಸಿ, ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರ ಎಂದರೆ ಸರಿಯಲ್ಲ.*

***<u>ಪಾಟೀ ಸವಾಲುಃ 8 ನೇ ಆರೋಪಿ ಪರ ವಕೀಲರಿಂದ ಃ</u>***

*ಈ ದೂರು ದಾಖಲಿಸುವ ಪೂರ್ವದಲ್ಲಿ ಬೇರೆ ಯಾವುದೇ ದೂರನ್ನು ಆರೋಪಿಗಳ ವಿರುದ್ಧ ದಾಖಲಿಸಿಲ್ಲ. 8 ಎಕರೆ ಆಸ್ತಿ ನಿಮ್ಮ ತಾಯಿ ಹೆಸರಿನಲ್ಲಿರುವ ಬಗ್ಗೆ ದಾಖಲೆಯನ್ನು ಈ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ಸರ್ವೆ ನಂ. 86 ರಲ್ಲಿ 8 ಎಕರೆ ವಿಸ್ತೀರ್ಣ ನಮ್ಮ*

ಕುಟುಂಬದ ಹೆಸರಿನಲ್ಲಿ ಇದೆ. 8 ಎಕರೆ ಆಸ್ತಿ ನಿಮ್ಮ ಕುಟುಂಬಕ್ಕೆ ದರ್ಕಾಸ್ ಮುಖಾಂತರ ಆಗಿದೆ ಎಂದರೆ ಸರಿ, ಅದಕ್ಕೆ ಸಂಬಂಧಪಟ್ಟ ಕಂದಾಯ ದಾಖಲಾತಿಗಳನ್ನು ಈ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ದಿಃ 02.06.2024 ರಂದು ಮಧ್ಯಾಹ್ನ 3 ಗಂಟೆಗೆ ಘಟನೆ ನಡೆಯಿತು. ದಿಃ 16.06.2024 ರಂದು ದೂರು ಕೊಟ್ಟಿರುತ್ತೇನೆ. ವಿಳಂಬವಾಗಿ ದೂರು ಕೊಟ್ಟಿರುವ ಬಗ್ಗೆ ಕಾರಣ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.1 ನ್ನು ನಾನೇ ಮಾಡಿರುತ್ತೇನೆ. ಪ್ರ.ವ ವರದಿಯಲ್ಲಿ ತುರ್ತು ಕೆಲಸದ ಮೇಲೆ ಹೊರಗಡೆ ಹೋಗಿದ್ದರಿಂದ ತಡವಾಗಿ ದೂರು ಕೊಟ್ಟಿರುತ್ತೇನೆ ಎಂದು ಹೇಳಿರುತ್ತೀರ ಎಂದರೆ ಸರಿ. ದಿಃ 02.06.2024 ರಂದು 1 ರಿಂದ 7 ನೇ ಆರೋಪಿಗಳ ಮೇಲೆ ಮಾತ್ರ ನೀವು ಆರೋಪ ಮಾಡಿರುತ್ತೀರ ಎಂದರೆ ಸರಿ. ನಂತರ ಸಾಕ್ಷಿ 8 ನೇ ಆರೋಪಿ ಸಹ ಇದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂ. 86 ರ ದಕ್ಷಿಣ ದಿಕ್ಕಿಗೆ ಮರೀಗೌಡ ರ ಮಗ ನವೀನ್ ಕುಮಾರ್ ರವರ ಜಮೀನು ಇದೆ ಎಂದರೆ, ಸಾಕ್ಷಿ ಮರೀಗೌಡರ ಜಮೀನಿದೆ ಎಂದು ಹೇಳುತ್ತಾರೆ. 8 ನೇ ಆರೋಪಿ ಅಂತನಹಳ್ಳಿ ಗ್ರಾಮದಲ್ಲಿ ತುಂಬಾ ದಿನದಿಂದ ವಾಸ ಇಲ್ಲ ಎಂದರೆ ಸರಿಯಲ. 8 ನೇ ಆರೋಪಿ ಮೈಸೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿ, ಸಾಕ್ಷಿ ಆ ದಿನ ಬಂದಿದ್ದರೂ ಎಂದು ಹೇಳುತ್ತಾರೆ. ನೀವು ಸಲ್ಲಿಸಿದ ದಾವೆಯಲ್ಲಿ ಮಧ್ಯಂತರ ನಿರ್ಬಂಧಕಜ್ಞೆ ಕೋರಿ ಸಲ್ಲಿಸಿದ ಅರ್ಜಿ ನಿಮ್ಮ ವಿರುದ್ಧ ದಿಃ ಸೆಪ್ಟಂಬರ್ 2024 ರಲ್ಲಿ ವಜಾ ಆಗಿದೆ ಎಂದರೆ ಸರಿಯಲ್ಲ. ಸರ್ವೆ ನಂ. 86 ರ ಪೈಕಿ ದುರಸ್ಥಿ ಬಗ್ಗೆ ಹದ್ದುಬಸ್ತಾಗಿಲ್ಲ ಎಂದರೆ, ಸಾಕ್ಷಿ ನನಗೆ ಅದರ ಬಗ್ಗೆ ಜ್ಞಾನ ಇಲ್ಲ ಎಂದು ಹೇಳುತ್ತಾರೆ. 8 ನೇ ಆರೋಪಿಯ ಸ್ವತ್ತನ್ನು ಲಪಟಾಯಿಸಲು ಸುಳ್ಳು ದೂರು ಕೊಟ್ಟಿರುತ್ತೀರ ಎಂದರೆ ಸರಿಯಲ್ಲ. ನೀವೇ ಸ್ವತಃ 8 ನೇ ಆರೋಪಿ ಸ್ವಾದೀನದಲ್ಲಿರುವ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರ ಎಂದರೆ

*ಸರಿಯಲ್ಲ. ಓ.ಎಸ್. 167/2024 ರಲ್ಲಿ 1 ರಿಂದ 7 ನೇ ಆರೋಪಿಗಳು 8 ನೇ ಆರೋಪಿಯಿಂದ ಕಂದಾಯ ದಾಖಲಾತಿಗಳನ್ನು ಪಡೆದುಕೊಂಡರು ಎನ್ನುವ ಏಕಮಾತ್ರ ಕಾರಣದಿಂದ 8 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೀರ ಎಂದರೆ ಸರಿಯಲ್ಲ. ನಿಮ್ಮ ಸ್ವತ್ತಿನ ಪೂರ್ವ ದಿಕ್ಕಿಗೆ ಯಾರ ಜಮೀನಿದೆ ಎಂದರೆ, ಸಾಕ್ಷಿ ಸರ್ಕಾರಿ ಜಮೀನಿದೆ ಎನ್ನುತ್ತಾರೆ. ದಿಃ 17.06.2024 ರಂದು ನಿ.ಪಿ. 2 ನ್ನು ಮಧ್ಯಾಹ್ನ 12.00 ಗಂಟೆಗೆ ಮಾಡಿದರು. ನಿಪಿ.2 ನ್ನು ಮಾಡುವಾಗ ಚಾಸಾ.5 ಮತ್ತು 6 ರವರಿದ್ದರು. ನಿಪಿ.2 ಕ್ಕೆ ನಾನು ಸಹಿ ಮಾಡಿದ್ದೇನೆ. ನಿಪಿ.2 ರಲ್ಲಿ ಚಕ್ಕುಬಂಧಿ ನಮೂದು ಮಾಡಿದೆ ಎಂದರೆ ಸರಿ. ನಿಪಿ.2 ರಲ್ಲಿ ಉಲ್ಲೇಖ ಮಾಡಿರುವ ಚಕ್ಕುಬಂಧಿಯ ಪ್ರಕಾರ ಘಟನೆ 1 ರಿಂದ 7 ಆರೋಪಿಗಳಿಗೆ ಸೇರಿರುವ ಜಮೀನಿನಲ್ಲಿ ಆಗಿದೆ ಎಂದರೆ ಸರಿಯಲ್ಲ. ಆರೋಪಿಗಳನ್ನು ಒಕ್ಕಲೆಬ್ಬಿಸಲು ಸುಳ್ಳು ಪ್ರಕರಣ ಕೊಟ್ಟಿರುತ್ತೀರ ಎಂದರೆ ಸರಿಯಲ್ಲ. 8 ನೇ ಆರೋಪಿಗೂ ಕೃತ್ಯಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***